# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 481 |
| ಮಾನ್ಯ ಸದಸ್ಯರ ಹೆಸರು | ಶ್ರೀ ಎಂ. ನಾಗರಾಜು (ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದವರು | ಅಬಕಾರಿ ಸಚಿವರು |
| ಉತ್ತರಿಸಬೇಕಾದ ದಿನಾಂಕ | 15.09.2022 |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಸರ್ಕಾರದಲ್ಲಿ ಹೊಸದಾಗಿ ಮದ್ಯದಂಗಡಿಗಳು ಮತ್ತು ಪಬ್‌ಗಳಿಗೆ ಪರವಾನಗಿ ನೀಡುವ ಉದ್ದೇಶವಿದೆಯೇ; ಮತ್ತು ರಾಜ್ಯದಲ್ಲಿ ಮತ್ತು ರಾಜಧಾನಿ ಬೆಂಗಳೂರಿನಲ್ಲಿ ಇರತಕ್ಕಂಥ ಪಬ್/ಬಾರ್/ವೈನ್‌ಸ್ಟೋರ್‌ಗಳ ಸಂಖ್ಯೆ ಎಷ್ಟು; ಸರ್ಕಾರಕ್ಕೆ ಬರುತ್ತಿರುವ ಆದಾಯವೆಷ್ಟು; | ಪ್ರಸ್ತುತ ಹೊಸದಾಗಿ ಮದ್ಯದಂಗಡಿಗಳು ಮತ್ತು ಸ್ವತಂತ್ರ ಪಬ್‌ಗಳಿಗೆ ಪರವಾನಗಿ ನೀಡುವ ಯಾವುದೇ ಪ್ರಸ್ತಾವನೆ ಸರ್ಕಾರದ ಮುಂದೆ ಇರುವುದಿಲ್ಲ.<br><br>ರಾಜ್ಯದಲ್ಲಿ 30.06.2022ರ ಅಂತ್ಯಕ್ಕೆ ಒಟ್ಟು 12,076 ವಿವಿಧ ರೀತಿಯ ಅಬಕಾರಿ ಸನ್ನದುಗಳು ಕಾರ್ಯನಿರ್ವಹಿಸುತ್ತಿವೆ. ಬೆಂಗಳೂರಿನಲ್ಲಿ 30.06.2022ರ ಅಂತ್ಯಕ್ಕೆ ಒಟ್ಟು 3,655 ವಿವಿಧ ರೀತಿಯ ಅಬಕಾರಿ ಸನ್ನದುಗಳು ಕಾರ್ಯನಿರ್ವಹಿಸುತ್ತಿವೆ.<br><br>2021-22ನೇ ಆರ್ಥಿಕ ಸಾಲಿನಲ್ಲಿ ರಾಜ್ಯದಲ್ಲಿರುವ ಎಲ್ಲಾ ರೀತಿಯ ಸನ್ನದುಗಳಿಂದ ಸನ್ನದು ಶುಲ್ಕ, ಅಬಕಾರಿ ಸುಂಕ, ದಂಡ ಮತ್ತು ಮುಟ್ಟುಗೋಲು, ಇತರೆ ಎಲ್ಲಾ ಮೂಲಗಳಿಂದ ಬೆಂಗಳೂರು ನಗರ ಜಿಲ್ಲೆಯಲ್ಲಿ ರೂ.8,346.62 ಕೋಟಿ ಹಾಗೂ ಉಳಿದ ಜಿಲ್ಲೆಗಳಿಂದ ರೂ.18,031.06 ಕೋಟಿ ಸೇರಿದಂತೆ ಒಟ್ಟು ರೂ.26,377.68 ಕೋಟಿಗಳಷ್ಟು ಅಬಕಾರಿ ರಾಜಸ್ವವನ್ನು ಸಂಗ್ರಹಿಸಲಾಗಿದೆ. |
| ಆ) | ಆದಾಯ ಹೆಚ್ಚಾಗುವುದಕ್ಕೆ ಕುಡುಕರ ಸಂಖ್ಯೆಯಲ್ಲಿ | ಅಬಕಾರಿ ಇಲಾಖೆಯಲ್ಲಿ ಕಳೆದ ಮೂರು ವರ್ಷಗಳಲ್ಲಿ ಅಂದರೆ 2019-20, 2020-21, 2021-22ನೇ ಸಾಲಿನಲ್ಲಿ ಕ್ರಮವಾಗಿ 601, 583 ಮತ್ತು 660 ಲಕ್ಷ ಪೆಟ್ಟಿಗೆಗಳಷ್ಟು ಭಾರತೀಯ ತಯಾರಿಕಾ ಮದ್ಯವನ್ನು ಹಾಗೂ 290, 238, ಮತ್ತು 269 ಲಕ್ಷ |

| | | |
|---|---|---|
| | ಏರಿಕೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಪೆಟ್ಟಿಗೆಗಳಷ್ಟು ಬಿಯರ್‌ನ್ನು ಮಾರಾಟ ಮಾಡಲಾಗಿರುತ್ತದೆ. ಈ ರೀತಿ ಮದ್ಯ ಮಾರಾಟದಿಂದ ಕಳೆದ ಮೂರು ವರ್ಷಗಳಲ್ಲಿ ಅಂದರೆ 2019-20, 2020-21, 2021-22ನೇ ಸಾಲಿನಲ್ಲಿ ಕ್ರಮವಾಗಿ 21584, 23332 ಮತ್ತು 26378 ಕೋಟಿಗಳಷ್ಟು ಅಬಕಾರಿ ರಾಜಸ್ವವನ್ನು ಸಂಗ್ರಹಿಸಲಾಗಿರುತ್ತದೆ. ಪ್ರತಿ ವರ್ಷ ಅಬಕಾರಿ ರಾಜಸ್ವದಲ್ಲಿ ಹೆಚ್ಚಾಗಿರುವುದರಿಂದ ಪಾನೀಕರ ಸಂಖ್ಯೆ ಹೆಚ್ಚಾಗಿರುವ ಸಾಧ್ಯತೆ ಇರುತ್ತದೆ. ಆದರೆ ಪಾನೀಕರ ಸಂಖ್ಯೆಯಲ್ಲಿ ಇಂತಿಷ್ಟೇ ಹೆಚ್ಚಳವಾಗಿದೆ ಎಂಬ ಬಗ್ಗೆ ನಿರ್ಧಿಷ್ಟವಾದ ಮಾಹಿತಿ ಇಲಾಖೆಯಲ್ಲಿ ಲಭ್ಯವಿರುವುದಿಲ್ಲ. |
| ಇ) | ನಾಗರೀಕರ ಕುಡಿತವನ್ನು ಕಡಿತಗೊಳಿಸಲು ಮತ್ತು ಜಾಗೃತಿಗೊಳಿಸಲು ಕೈಗೊಂಡಿರುವ ಕ್ರಮಗಳೇನು? | ಮದ್ಯಪಾನ ದುಷ್ಪರಿಣಾಮಗಳ ಬಗ್ಗೆ ಕಾನೂನು ರೀತಿಯ ಎಚ್ಚರಿಕೆ ಜಾಗೃತಿ ಕಾರ್ಯಕ್ರಮಗಳನ್ನು ವಾರ್ತಾ ಮತ್ತು ಪ್ರಚಾರ ಇಲಾಖೆಯ ಅಡಿಯಲ್ಲಿ "ಕರ್ನಾಟಕ ರಾಜ್ಯ ಮದ್ಯಪಾನ ಸಂಯಮ ಮಂಡಳಿ" ವತಿಯಿಂದ ನಡೆಸಲಾಗುತ್ತಿದೆ.<br><br>ಕರ್ನಾಟಕ ಅಬಕಾರಿ (ಸನ್ನದುಗಳ ಸಾಮಾನ್ಯ ಷರತ್ತುಗಳು) ನಿಯಮಗಳು, 1967ರ ನಿಯಮ 5ರಡಿ ಶೈಕ್ಷಣಿಕ ಸಂಸ್ಥೆಗಳು, ಆಸ್ಪತ್ರೆ, ಧಾರ್ಮಿಕ ಸಂಸ್ಥೆಗಳು, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಕಾಲೋನಿಯಂತಹ ಸ್ಥಳಗಳಿಂದ 100 ಮೀಟರ್ ಅಂತರದೊಳಗೆ ಮದ್ಯ ಮಾರಾಟ ಸನ್ನದುಗಳನ್ನು ನೀಡಲು ಅವಕಾಶವಿರುವುದಿಲ್ಲ. ಅಕ್ರಮ ಮದ್ಯದ ದುಷ್ಪರಿಣಾಮಗಳ ಕುರಿತು ಕ್ಷೇತ್ರ ಸಿಬ್ಬಂದಿಯವರಿಂದ ಗ್ರಾಮಾಂತರ ಹಾಗೂ ನಗರ ಪ್ರದೇಶಗಳಲ್ಲಿ ಜನ ಜಾಗೃತಿ ಕಾರ್ಯಕ್ರಮಗಳನ್ನು ಆಯೋಜಿಸಲಾಗುತ್ತಿದೆ. ಶೈಕ್ಷಣಿಕ ಸಂಸ್ಥೆಗಳು ಹಾಗೂ ವೃತ್ತಿಪರ ಕಾಲೇಜುಗಳಲ್ಲಿ ಮದ್ಯಪಾನದಿಂದ ಆಗುವ ಅನಾಹುತಗಳ ಬಗ್ಗೆ ಕಮ್ಮಟಗಳನ್ನು ಏರ್ಪಡಿಸಿ ಜಾಗೃತಿ ಮೂಡಿಸಲಾಗುತ್ತಿದೆ. ಗ್ರಾಮ ಸಭೆಗಳಲ್ಲಿ ಅನಧಿಕೃತ ಮದ್ಯ ಸಂಬಂಧಿತ ವಿಷಯಗಳ ಬಗ್ಗೆ ಚರ್ಚಿಸಲಾಗುತ್ತಿದೆ. ತಾಲ್ಲೂಕು ಹಾಗೂ ಜಿಲ್ಲಾ ಮಟ್ಟದ ಕಾನೂನು ಅರಿವು ಕಾರ್ಯಕ್ರಮಗಳಲ್ಲಿ ಅಕ್ರಮ ಮದ್ಯ ಸೇವನೆಯ ದುಷ್ಪರಿಣಾಮಗಳ ಬಗ್ಗೆ ಕಾನೂನಿನ ತಿಳುವಳಿಕೆಯನ್ನು |



Generated from eOffice by GOPALAIAH K, FD-EXCISE MIN(GK), EXCISE MINISTER, FINANCE DEPT.SEC on 14/09/2022 01:52 PM

| | | |
|---|---|---|
| | | ನೀಡಲಾಗುತ್ತಿದೆ. ಅಲ್ಲದೇ, ಮದ್ಯದ ಬಾಟಲುಗಳಲ್ಲಿನ ಲೇಬಲ್‌ಗಳ ಮೇಲೆ ಕಡ್ಡಾಯವಾಗಿ ಮದ್ಯಪಾನ ಸೇವನೆಯಿಂದ ಆರೋಗ್ಯಕ್ಕೆ ಹಾನಿಕರ ಎಂಬ ಶೀರ್ಷಿಕೆಯನ್ನು ಮುದ್ರಿಸಲಾಗುತ್ತಿದೆ ಹಾಗೂ ನಾಗರೀಕರಲ್ಲಿ ಜವಾಬ್ದಾರಿಯುತ ಮದ್ಯ ಸೇವನೆಯನ್ನು ಜಾಗೃತಗೊಳಿಸುವುದು ಕೂಡ ಇಲಾಖೆಯ ಧ್ಯೇಯೋದ್ದೇಶವಾಗಿರುತ್ತದೆ. ಈ ರೀತಿಯಾಗಿ ಇಲಾಖಾ ವತಿಯಿಂದ ಮದ್ಯಪಾನಕ್ಕೆ ಸಂಬಂಧಿಸಿದಂತೆ ನಾಗರೀಕರಲ್ಲಿ ಜಾಗೃತಗೊಳಿಸುವ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ. |

**ಆಇ 76 ಇಎಲ್‌ಕ್ಯೂ 2022**

(ಕೆ. ಗೋಪಾಲಯ್ಯ)
ಅಬಕಾರಿ ಸಚಿವರು



Generated from eOffice by GOPALAIAH K, FD-EXCISE MIN(GK), EXCISE MINISTER, FINANCE DEPT.SEC on 14/09/2022 01:52 PM